SRI N. HUTCHAMASTHY GOWDA (Minister for Revenue).—

(a) No.

(b) Permanent relief measures are not taken up. But D.P A.P. scheme which is a kin to permanent relief measures is taken up.

DISTRIBUTION OF LAND TO LANDLESS IN SHIKARIPUR TALUK

544. SRI K. YENKATAPPA (Shikaripur).—Will the Minister for Revenue be pleased to state :—

(a) the extent of land available in Shikaripur taluk for distribution to the landless ;

(b) the extent of land distributed in this taluk during the Presidenst's Rule ;

(c) the extent of land now available to Government for distribution ;

(d) whether it has come to the notice of the Government that some irregularities have been done during the President's rule in respect of land distribution in this taiuk ;

(e) if so, whether Government intends to rectify it ?

SRI N. HUTCHAMASTHY GOWDA (Minister for Revenue).—

(a) 8,884 acres and 3 guntas.

(b) 1,349 acres and 36 guntas.

(c) 8,884 acres and 03 guntas.

(d) No.

(e) Does not arise.

REPLIES DUE TO SOME CALLING ALLENTION NOTICE

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ...

ಅಧ್ಯಕ್ಷರು.—ತಮ್ಮ ಗಮನ ಸೆಳೆಯುವ ಸೂಚನೆ ಇದೆ. ಮುಖ್ಯಮಂತ್ರಿಗಳು ಮಾಡುವ ಕೆಲಸಕ್ಕೆ ವಿದ್ಯಾ ಮಂತ್ರಿಗಳು ಮೈಸೂರಿಗೆ ಹೋಗಿದ್ದಾರೆ. ಅದನ್ನು ನಾಳೆ ತೆಗೆದುಕೊಳ್ಳೋಣ.

SRI H.S. SIDDAPPA.—I had submitted a notice about four days ago.

MADAM SPEAKER.—I have called for the report. After the report is received we will take it up.

SRI MALLIKARJUN KHARGE.—I had given a call attention notice regarding Agricultural University.

MADAM SPEAKER.—That has been sent to Government. Let the answer be received.

ಶ್ರೀ ಎಂ.ಎಚ್. ಜಯಂಪ್ರಕಾಶ್ ನಾರಾಯಣ್.–ಸಿರಸಿಯಂ ಕಟ್ಟಿಗೆ ಗಾಡಿಯವರಿಗೆ ಸಂಬಂಧಪಟ್ಟಂತೆ ಒಂದು ಗವಂನ ಸೆಳೆಯುವ ಸೂಚನೆಯನ್ನು ಕಳುಹಿಸಿ ಎಂಟು ದಿವಸವಾಯಿತು.

ಅಧ್ಯಕ್ಷರು.—ಅದನ್ನು ನಾನು ಸರ್ಕಾರಕ್ಕೆ ಕಳುಹಿಸಿದ್ದೇನೆ.

ಶ್ರೀ ಎಂ ಎಚ್ .ಜಯಂಪ್ರಕಾಶ್ ನಾರಾಯಣ್ (ಎತ್ತರಿಸಿದ ಧ್ವನಿಯಿಂದ).—ಸಿರಸಿ ಬಂದ್ ಆಗಿದೆ. ಆ ಜನ ಒಂದು ವಿಧಾನ ಸೌಧದ ಮುಂದೆ ಅನ್ನ ಸತ್ಯಾಗ್ರಹ ಮಾಡುವ ಪರಿಸ್ಥಿತಿ ಬಂದಿದೆ...

ಅಧ್ಯಕ್ಷರು —ಮಾನ್ಯ ಸದಸ್ಯರು ಧ್ವನಿ ಎತ್ತರಿಸಿ ಜೋರಾಗಿ ಹೇಳುವುದರಿಂದ ಉತ್ತರ ಬರುವುದಿಲ್ಲ. ಉತ್ತರ ಬಂದ ನಂತರ ಕಾರ್ಯಕ್ರಮ ಪಟ್ಟಿಯಲ್ಲಿ ಹಾಕುತ್ತೇನೆ.

ಶ್ರೀ ಎಂ.ಎಚ್. ಜಯಂಪ್ರಕಾಶ್ ನಾರಾಯಣ್.–ಅದನ್ನು ಕಳುಹಿಸಿ ೧೫ ದಿವಸವಾಗಿದೆ. ಒಂದೆರಡು ದಿವಸದ ಪ್ರಶ್ನೆಯಲ್ಲ.

MADAM SPEAKER.—Let the reply come from Government. I shall put it on the agenda. I am really sorry about the behaviour of the hon. member.

SRI H M. CHANNABASAPPA.—I am really sorry for the remarks of the hon. member. This way of doing things should be stopped by the Chair.

MADAM SPEAKER.—Then I will have to take action here after wards.

SRI M.H. JAYAPRAKASH NARAYAN.—What do you mean ?

ಶ್ರೀ ಕಾಗೋಡು ತಿಮ್ಮಪ್ಪ.—ಆ ಜನ ಕಟ್ಟಿಗೆ ಮಾರಿ ಜೀವನ ಮಾಡುವವರಿದ್ದಾರೆ. ಅವರಿಗೆ ಒದಗಿರುವ ಪರಿಸ್ಥಿತಿಯ ಬಗ್ಗೆ ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕಳುಹಿಸಿರುವ ಸೂಚನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ, ಅದಕ್ಕೆ ಉತ್ತರ ಬರಬೇಕು. I just kept quiet when son ebody said 'what do you mean ?' Let all the hon. Members know that I mean what I say.

ಶ್ರೀ ಕಾಗೋಡು ತಿಮ್ಮಪ್ಪ.—ಇವೊತ್ತಿನವರೆಗೂ ಸರಕಾರದವರು ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಹೋದ ಶಾಸನ ಸಭೆಯಲ್ಲಿ ಈ ಮಾತು ಬಂದಿತ್ತು ಸರಕಾರ ನಿರ್ದೇಶನ ಕೊಡ ಬೇಕಾಗಿತ್ತು. ಸರಕಾರ ಮಲಗಿದೆಯೋ ಎಂದು ಕೇಳಬೇಕಾಗುತ್ತದೆ.

ಅಧ್ಯಕ್ಷರು.—ದಿನಾ ಒಂದೊಂದು ಕಾಲ್ ಅಟೆನ್‌ಷನ್ ನೋಟೀಸ್ ತೆಗೆದುಕೊಳ್ಳುತ್ತಾ ಇದ್ದೇವೆ. As and when we receive replies, we are putting them on the Agenda.

1-30 P.M.

ಶ್ರೀ ಕಾಗೋಡು ತಿಮ್ಮಪ್ಪ.—೧೫ ದಿವಸದ ಹಿಂದೆ ಸರಕಾರಕ್ಕೆ ಇದನ್ನು ಕಳುಹಿಸಿದ್ದರೂ ಕೂಡ ಸರಕಾರದವರು ಇನ್ನೂ ಉತ್ತರ ಕೊಟ್ಟಿಲ್ಲ. ಆ ಜನರು ಕಟ್ಟಿಗೆ ವ್ಯಾಪಾರ ಮಾಡಬೇಕು, ಊಟಮಾಡ ಬೇಕು. ಆ ಸ್ಥಿತಿಯಲ್ಲಿದ್ದಾರೆ. ಇಂಥಾ ವಿಷಯದಲ್ಲಿ ಸರಕಾರ ಶೀಘ್ರವಾಗಿ ಉತ್ತರ ಕೊಟ್ಟರೆ ಒಳ್ಳೆಯದು. ಸಂದರ್ಭವನ್ನು ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು.—ಹೇಳುವುದಕ್ಕೆ ಬಂದು ರೀತಿ ನೀತಿ ಇಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಹೇಳುವುದನ್ನು ಒಪ್ಪುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಕಟ್ಟಿಗೆ ಕಡಿಯುವ ವಿಷಯ ಹೋದ ಅಸೆಂಬ್ಲಿಯಲ್ಲಿ ಬಂದಿತ್ತು. ಇದರ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ಕೆ ಹೆಚ್. ಪಾಟೀಲರು ಉತ್ತರ ಕೊಡುತ್ತಾ, ಚರ್ಚೆ ಮಾಡಿ ಇದನ್ನು ತೀರ್ಮಾನ ಮಾಡುತ್ತೇವೆ ಎಂದು ಭರವಸೆ ಕೊಟ್ಟರು. ಹಾಗಿದ್ದರೂ ಕೂಡ ಇಲ್ಲಿಯವರೆಗೆ ತೀರ್ಮಾನವಾಗಿಲ್ಲ. ಈಗ ಬಜೆಟ್ ಅಧಿವೇಶನ ಪ್ರಾರಂಭ ಆಗಿದೆ. ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ, ಇದರ ಬಗ್ಗೆ ಆದಷ್ಟು ಶೀಘ್ರ ಸರಕಾರದವರು ಉತ್ತರ ಕೊಡಬೇಕೆಂದು ಒತ್ತಾಯ ಮಾಡಬೇಕು. ಜಾಗ್ರತೆ ಉತ್ತರ ಬಾರದೆ ಇದ್ದರೆ ಸಾವಿರಾರು ಕುಟುಂಬಗಳಿಗೆ ತೊಂದರೆ ಯಾಗುತ್ತದೆ. ನಾನು ಕೂಡ ಈ ಪ್ರಶ್ನೆಯಮೇಲೆ ಅರೆಸ್ಟ್ ಆಗಿ ಜೈಲಿಗೆ ಹೋಗುವವನು ಇದ್ದೇನೆ. ಆದ್ದರಿಂದ ಸರಕಾರದ ಕಡೆಯಿಂದ ಇದರ ಬಗ್ಗೆ ಬೇಗನೆ ಉತ್ತರ ಬರಲಿ. ಮತ್ತು ಸರಕಾರದವರು ಅತೀ ಜರೂರಾಗಿ ಹೇಳಿಕೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

SRI H. M. CHANNABASAPPA.—I assure on behalf of Government that immediate action will be taken to furnish replies expeditiously.

ಶ್ರೀ ಎಸ್. ಬಂಗಾರಪ್ಪ.—ನಾಳೆ ಯಾತಕ್ಕೆ ಕೊಡಬಾರದು ?

ಅಧ್ಯಕ್ಷರು.—ಈಗಲೆಲ್ಲ ಕೊಡಿ ಎಂದರೆ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾರೆ. ಅವರು ಅಲ್ಲಿಂದ ಬಂದ ಮೇಲೆ ಇಲ್ಲಿ ಹೇಳಿಕೆ ಕೊಡಬೇಕು. ಚಿಟಿಕೆ ಹೊಡೆದರೆ ಮಾವಿನಕಾಯಿ ಬೀಳುತ್ತದೆಯೆ ?

ಶ್ರೀ ಎಸ್. ಬಂಗಾರಪ್ಪ.—ಚಿಟಿಕೆ ಹೊಡೆದರೆ ಮಾವಿನಕಾಯಿ ಬೀಳುವಷ್ಟು ಜಾಗ್ರತೆ ಕೆಲಸ ಮಾಡಬೇಕು. ಆದರೆ ಆ ರೀತಿ ಮಾಡುತ್ತಾ ಇಲ್ಲ ಎನ್ನುವುದೇ ನಮ್ಮ ವ್ಯಥೆ.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಒರಿಜನಲ್ ವರ್ಕ್ಸ್ ಮತ್ತು ಮೇಜರ್ ಇರಿಗೇಷನ್ ವರ್ಕ್ಸ್‌ನ ಯಾವ ಬಿಲ್ಲನ್ನೂ ಪಾಸ್ ಮಾಡಕೂಡದು ಎಂದು ಸಂಬಂಧಪಟ್ಟ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳಿಗೆ ಸೂಚನೆ ಕಳುಹಿಸಿಕೊಟ್ಟಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿಯ ಕೆಲಸ ನಿಂತು ಹೋಗಿದೆ. ಎರಡನೆಯದು ಗವರ್ನಮೆಂಟ್ ಬಿಲ್ಡಿಂಗ್ಸ್‌ಗಳಿಗೆ ಸುಣ್ಣ, ಬಣ್ಣ, ರಿಪೇರಿ ಕೂಡ ಮಾಡದೆ ಹಾಗೆ ದುಡ್ಡನ್ನು ವಾಪಸ್ ತೆಗೆದುಕೊಂಡಿದ್ದಾರೆ. ಹಾಸನ ಫರ್ಸ್ಟ್ ಗ್ರೇಡ್ ಕಾಲೇಜಿನ ಇಡೀ ಬಿಲ್ಡಿಂಗ್‌ನ್ನು ಅರ್ಧಂಭರ್ಧ ಕಿತ್ತುಹಾಕಿದ್ದಾರೆ. ಮಕ್ಕಳು ಕುಳಿತುಕೊಂಡು ಏನು ವಿದ್ಯಾಭ್ಯಾಸ ಮಾಡುತ್ತಾರೋ ಗೊತ್ತಾಗುವುದಿಲ್ಲ.

SRI H. M. CHANNABASAPPA.—I have received the notice just now.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರಿಗೆ ಸಂಶಯ ಬೇಡ. ಅವರು ಇಲ್ಲಿಯೇ ಇರುವುದರಿಂದ ತಕ್ಷಣ ಉತ್ತರ ಹೇಳಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ಹೇಮಾವತಿ ಪ್ರಾಜೆಕ್ಟ್ ಕೆನಾಲ್ ವಿರಿಯಾದಲ್ಲಿ ಸಾವಿರಾರು ಜನ ಕೆಲಸ ಮಾಡುತ್ತಾ ಇದ್ದಾರೆ. ಕೆಲಸ ತಕ್ಷಣ ನಿಲ್ಲಿಸಬೇಕೆಂದು ಹೇಳಿದ್ದಾರೆ. ಸಾವಿರಾರು ಜನ ಬಿಜಾಪುರ ಮತ್ತು ಗುಲ್ಬರ್ಗದಿಂದ ಬಂದವರು ಉದ್ದಕ್ಕೂ ಅಲ್ಲಿ ಪೆದ್ದುಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಾ ಇದ್ದಾರೆ. ಅಂತಹ ಜನರು ಈಗ ಜನರು ಈಗ ವಾಪಸ್ ಹೋಗಬೇಕಾಗುತ್ತದೆ. ದುಡ್ಡು ಕೊಡದೆ ಹೋದರೆ ಕಂಟ್ರಾಕ್ಟರು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಹಣ ಖರ್ಚುಮಾಡಿ ಜಾಸ್ತಿ ಕೆಲಸ ಆಗುವುದು ಫೆಬ್ರುವರಿ ತಿಂಗಳಲ್ಲಿ. ಜಾಸ್ತಿ ಕೆಲಸ ಮಾಡುವ ಕಾಲದಲ್ಲಿ ಗ್ರಾಂಟನ್ನು ವಾಪಸ್ ತೆಗೆದುಕೊಂಡು ಕೆಲಸ ನಿಲ್ಲಿಸಿ ಎಂದು ಹೇಳುವುದರಿಂದ ದೇಶದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತದೆ. ಅದಕ್ಕೆ ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ. ನಾಳೆ ದಿವಸ ಸಭೆಯಲ್ಲಿ ಸ್ಟೇಟ್‌ಮೆಂಟ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅಪ್ಪಣೆ ಪಡೆದು ಒಂದು ವಿಷಯವನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಮಾನ್ಯ ಮಂತ್ರಿಗಳು ರಾಜ್ಯಪಾಲರ ಮಂದನಾ ನಿರ್ಣಯಕ್ಕೆ ಚರ್ಚೆ ನಡೆದಂಥ ಕಾಲದಲ್ಲಿ ಉತ್ತರ ಕೊಡುತ್ತಾ ಮೈಸೂರು ರಾಜ್ಯದ ಬರಗಾಲದ ಪರಿಸ್ಥಿತಿ ಬಗ್ಗೆ ಸಂಪೂರ್ಣ ನೆರವು ಕೇಂದ್ರದಿಂದ ಬರುತ್ತದೆ ಎಂದು ಭರವಸೆಯನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದರು. ಇದರ ಬಗ್ಗೆ ಹಂತ ಹಂತವಾಗಿ ಹಣವನ್ನು ಮೈಸೂರು ರಾಜ್ಯಕ್ಕೆ ಕೊಡುತ್ತಾರೆ. ಒಂದೇ ಸಾರಿಗೆ ಎಷ್ಟು ಹಣವನ್ನು ಕೊಡುತ್ತಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಹಂತ ಹಂತದಲ್ಲಿ ಬರುತ್ತದೆ ಎಂದು ಹೇಳಿದರು. ಉತ್ತರ ಕೊಡುತ್ತಾ ಮಾನ್ಯ ಮಂತ್ರಿಗಳು ಮುಖ್ಯ ಮಂತ್ರಿಗಳಾ ಪ್ರಧಾನಿ ಇಂದಿರಾಗಾಂಧಿ ಹತ್ತಿರ ಮಾತನಾಡಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಎಲ್ಲಾ ನೆರವು ನಮಗೆ ಕೇಂದ್ರದಿಂದ ದೊರಕುತ್ತದೆ ಎನ್ನತಕ್ಕ ಭರವಸೆಯನ್ನು ಇಟ್ಟುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದರು. ಹಿಂದಿನ ಶಾಸನಸಭೆಯಲ್ಲಿ ಯಾವ ರೀತಿ ಹೇಳಿಕೆ ಮಾತನ್ನು ಹೇಳಿದ್ದಾರೋ ಅದಕ್ಕೂ ದೆಹಲಿಯಲ್ಲಿ ಕೊಟ್ಟಿರತಕ್ಕ ಹೇಳಿಕೆಗೂ ಯಾವ ವ್ಯತ್ಯಾಸವೂ ಕಂಡು ಬಂದಿಲ್ಲ ಯಾವ ರೀತಿ ನೆರವು ಕೊಡುತ್ತಾರೆ, ಎಷ್ಟು ನೆರವು ಕೊಡುತ್ತಾರೆ, ಯಾವಾಗ ಬರುತ್ತದೆ ಎನ್ನುವುದು ಪತ್ರಿಕೆಯಲ್ಲಿ ಬಗಲಿಲ್ಲ. ನಾವು ಇದರ ವಿಷಯದಲ್ಲಿ ಬಹಳ ಕುತೂಹಲವುಳ್ಳವರಾಗಿದ್ದೇವೆ. ಮುಂಖ್ಯ ಮಂತ್ರಿಗಳು ದೆಹಲಿಯಿಂದ ಬಂದ ಮೇಲೆ ಸಭೆಗೆ ಬಂದಿಲ್ಲ. ಎಷ್ಟು ಪ್ರಮಾಣದ ನೆರವು ನಮಗೆ ಯಾವಾಗ ಬರುತ್ತದೆ ಎನ್ನುವ ಬಗ್ಗೆ ಮಾನ್ಯ ಮುಂಖ್ಯ ಮಂತ್ರಿಗಳ ಕೈಯಲ್ಲಿ ಒಂದು ಹೇಳಿಕೆಯನ್ನು ಕೊಡಿಸಿ ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ನನಗೆ ತಿಳಿದ ಮಟ್ಟಿಗೆ ಡಿಲ್ಲಿಯ ರಾಯಭಾರದಲ್ಲಿ ಫೇಲ್ ಆಗಿದ್ದಾರೆ. ಅವರ ಪ್ರಯತ್ನದಲ್ಲಿ ವಿಫಲವಾಗಿದ್ದಾರೆ ಎಂದು ತಿಳಿದು ಬಂದಿದೆ. ಈ ಸಭೆಯಲ್ಲಿ ಒಂದು ಹೇಳುವುದು, ದೆಹಲಿಯಿಲ್ಲಿ ಒಂದುಹೇಳುವುದು, ಆಗಬಾರದು. ದೆಹಲಿಗೆ ಹೋದ ಮೇಲೆ ಅಷ್ಟು ಆಶಾದಾಯಕವಾದ ಹೇಳಿಕೆ ಬರಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಫೇಲ್ ಆಗಿದೆ ಎಂದು ಯಾರು ಹೇಳಿದರು.

ಶ್ರೀ ಪಾಟಾಳ್ ನಾಗರಾಜ್.—ನಮ್ಮ ಗೂಡಾಚಾರರು ಇದ್ದಾರೆ. ನಾನು ಲಘುವಾಗಿ ಮಾತ ನಾಡುತ್ತಾ ಇಲ್ಲ. ದೆಹಲಿಯ ರಾಯಭಾರದಲ್ಲಿ ವಿಫಲವಾಗಿದೆ ಎನ್ನುವುದು ನನ್ನ ವೈಯಂಕ್ತಿಕವಾದ ಅಭಿಪ್ರಾಯಂ. ಆದುದರಿಂದ ಮುಖ್ಯಮಂತ್ರಿಗಳನ್ನು ಕರಿಸಿ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಿಸಿ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

SRI H. M. CHANNABASAPPA.—Appropriate statement will be made at the appropriate time.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಮೂಲಕ ನಾನು ಕೇಳುವುದು ಸರಕಾರದ ಹೇಳಿಕೆಯನ್ನು ಇಲ್ಲಿ ಕೊಡಲಿ ಎಂದು.

ಶ್ರೀ ಹೆಚ್ ಎಂ. ಚನ್ನಬಸಪ್ಪ.—ಸಕಾಲ ಬಂದಾಗ ಮುಖ್ಯಮಂತ್ರಿಗಳು ಇಲ್ಲಿ ಹೇಳಿಕೆ ಕೊಡುತ್ತಾರೆ. I am not here only to misguide friends. The hon. Chief Minister will take the House into confidence and make such a statement as may be expedient.

MOTION TO NOMINATE MEMBERS TO THE JOINT SELECT COMMITTEE ON THE BOMBAY PROVINCIAL MUNICICIPAL CORPORATIONS (EXTENSION AND AMENDMENT) BILL 1968.

SRI B. BASAVALINGAPPA (Minister for Municipal Administration).—I beg to move :